ಪ್ರಜಾವಾಣಿ

**Friday, December 16, 2011**



ಮಣಿಪಾಲದ ಮರಿನಾ ಕ್ರೀಡಾ ಸಂಕೀರ್ಣದಲ್ಲಿ ಗುರುವಾರ ಮುಕ್ತಾಯಗೊಂಡ ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯ ಪುರುಷರ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡ ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯ ತಂಡದ ಆಟಗಾರರು ಮಣಿಪಾಲ ವಿ.ವಿ. ಸಹ ಕುಲಪತಿ ಪ್ರೊ. ಎಚ್.ಎಸ್.ಬಲ್ಲಾಳ್ ಅವರಿಂದ ಟ್ರೋಫಿ ಸ್ವೀಕರಿಸಿದರು.

*ದಕ್ಷಿಣ ವಲಯ ಅಂತರ ವಿವಿ ಟೆನಿಸ್*

# ಜೈನ್ ವಿವಿ ತಂಡಕ್ಕೆ ಟ್ರೋಫಿ

**ಪ್ರಜಾವಾಣಿ ವಾರ್ತೆ**

ಉಡುಪಿ: ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯ ತಂಡ ಮಣಿಪಾಲದ ಮರಿನಾ ಕ್ರೀಡಾ ಸಂಕೀರ್ಣದಲ್ಲಿ ಗುರುವಾರ ಮುಕ್ತಾಯಗೊಂಡ ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯ ಪುರುಷರ ಟೆನಿಸ್ ಟೂರ್ನಿಯ ಅಂತಿಮ ಹಣಾಹಣಿಯಲ್ಲಿ ಚೆನ್ನೈನ ಶ್ರೀರಾಮಸ್ವಾಮಿ ಮೆಮೋರಿಯಲ್ (ಎಸ್‌ಆರ್‌ಎಂ) ವಿವಿ ತಂಡವನ್ನು ಸೋಲಿಸಿ ಪ್ರಶಸ್ತಿ ಗೆದ್ದುಕೊಂಡಿತು.

ಇದೇ ಮೊದಲ ಬಾರಿ ಫೈನಲ್‌ಗೆ ಬಂದಿದ್ದ ಜೈನ್ ವಿವಿ ತಂಡ, 3–0 ಅಂತರದ ಸುಲಭ ಗೆಲವು ಸಾಧಿಸಿತು. ಈ ತಂಡ ಟೂರ್ನಿಯುದ್ದಕ್ಕೂ ಉತ್ತಮ ಪ್ರದರ್ಶನ ನೀಡಿತು.

ಜೈನ್ ವಿವಿ ತಂಡದ ವಿನೋದ್ ಗೌಡ, ಮೊದಲ ಸಿಂಗಲ್ಸ್‌ನಲ್ಲಿ ಎಸ್‌ಆರ್‌ಎಂ ತಂಡದ ಪೃಥ್ವಿ ಅವರನ್ನು 6–0, 6–1 ಅಂತರದಿಂದ ಹಿಮ್ಮೆಟ್ಟಿಸಿದರು.

ಸಾಗರ್ ಮಂಜಣ್ಣ ಎರಡನೇ ಸಿಂಗಲ್ಸ್‌ನಲ್ಲಿ ಪಿ.ಮಣಿಕಂಠನ್ ಅವರನ್ನು 6–3, 6–2 ನೇರ ಸೆಟ್‌ಗಳಿಂದ ಮಣಿಸಿದರು.

ಡಬಲ್ಸ್‌ನಲ್ಲಿ ಕಿರಣ್ –ವಸಂತ್ ಜೋಡಿ 6–2, 6–2ರಲ್ಲಿ ಮಾನವ್ –ಸಾಹಿಲ್ ಜೋಡಿಯನ್ನು ಸೋಲಿಸಿದರು. ಕಳೆದ ವರ್ಷದ ಚಾಂಪಿಯನ್, ಹೈದರಾಬಾದ್ ಉಸ್ಮಾನಿಯಾ ವಿವಿ ಈ ಬಾರಿ ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು.